ಪೋಲೀಸ್ ಇಲಾಖೆಯಂ ಒಂದನೇ ಹಾಗೂ ಎರಡನೇ ದರ್ಜೆ ಅಧಿಕಾರಿಗಳು

೧೭೫೭. ಶ್ರೀ ಕೆ.ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಒಂದನೇ ದರ್ಜೆ ಹಾಗು ಎರಡನೇ ದರ್ಜೆ ಪೋಲೀಸ್ ಅಧಿಕಾರಿಗಳು ಒಂದೇ ಜಾಗದಲ್ಲಿ ೨ ರಿಂದ ೩, ೩ ರಿಂದ ೪ ವರ್ಷ ಮತ್ತು ೪ ರಿಂದ ೫ ವರ್ಷ ಸೇವೆ ಸಲ್ಲಿಸಿದ ಅಧಿಕಾರಿಗಳೆಷ್ಟು, (ಸಿ.ಎ.ಆರ್. ಮತ್ತು ಡಿ.ಎ.ಆರ್.ಅಧಿಕಾರಿಗಳನ್ನು ಹೊರತುಪಡಿಸಿ)

ಆ) ಹಾಗಿದ್ದಲ್ಲಿ ಈ ಅಧಿಕಾರಿಗಳನ್ನು ಒಂದೇ ಸ್ಥಳದಲ್ಲಿ ಅಷ್ಟು ವರ್ಷ ಇಟ್ಟುಕೊಳ್ಳಲು ಕಾರಣ ವೇನು ?

ಶ್ರೀ ರಾಮಕೃಷ್ಣಹೆಗಡೆ (ಮುಖ್ಯಮಂತ್ರಿಯವರು).—
ಅ) ವಿವರಗಳು ಕೆಳಕಂಡಂತಿವೆ.

	ಒಂದನೇ ದರ್ಜೆ ಅಧಿಕಾರಿಗಳು	ಎರಡನೇ ದರ್ಜೆ ಅಧಿಕಾರಿಗಳು
೨ ರಿಂದ ೩ ವರ್ಷ	೪೮	೭೦
೩ ರಿಂದ ೪ ವರ್ಷ	೧೩	೩೪
೪ ರಿಂದ ೫ ವರ್ಷ	೧೧	೧೮

ಆ) ಕೆಲವೊಂದು ಹುದ್ದೆಗಳು ಬೆಂಗಳೂರನ್ನು ಬಿಟ್ಟು ಬೇರೆಡೆ ಇಲ್ಲ ಮತ್ತು ಕೆಲವು ಅಧಿಕಾರಿಗಳನ್ನು ಆಡಳಿತಾತ್ಮಕ ದೃಷ್ಟಿಯಿಂದ ಒಂದೇ ಸ್ಥಳದಲ್ಲಿ ಹೆಚ್ಚು ಕಾಲ ಮುಂದುವರಿಸಬೇಕಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಂ ಗುಲ್ಬರ್ಗಾ ವಿಭಾಗದ ಲಾಭ ನಷ್ಟಗಳು

೧೭೮೬. ಶ್ರೀ ಶಿವಶೇಖರಗೌಡ ಶಿರವಾಳ್ (ಶಹಾಪುರ) —ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಗುಲ್ಬರ್ಗ ವಿಭಾಗವು ರಾಷ್ಟ್ರೀಕರಣವಾದ ನಂತರ ೧೯೫೫-೫೬ ೧೯೫೬-೫೭ ಮತ್ತು ೧೯೫೭-೫೮ನೇ ಸಾಲಿನಲ್ಲಿ ಗಳಿಸಿರುವ ಲಾಭವೆಷ್ಟು ಹಾಗೂ ನಷ್ಟ ವೆಷ್ಟು?

ಶ್ರೀ ಪಿ.ಡಿ. ಆರ್. ಖಂಧ್ಯ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಗುಲ್ಬರ್ಗ ವಿಭಾಗ ಅನುಭವಿಸಿದ ನಷ್ಟ ಈ ಕೆಳಗೆ ವಿವರಿಸಿದಂತಿದೆ.

೧೯೫೫-೫೬	೧೨೦-೨೦ ಲಕ್ಷ ರೂ.
೧೯೫೬-೫೭	೮೫-೨೧ ,,
೧೯೫೭-೫೮	೧೫೩-೨೧ ,,
	(ತಾತ್ಕಾಲಿಕ)

ಗಂಧದ ಅಕ್ರಮಂ ಸಾಗಾಣಿಕೆ ಬಗ್ಗೆ

೧೭೯೬. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪೋಲೀಸ್ ಇಲಾಖೆಯವರು ಗಂಧದ ಮರಗಳನ್ನು ಅಕ್ರಮ ಕಳ್ಳಸಾಗಾಣಿಕೆ ಮಾಡುತ್ತಿರುವವರನ್ನು ಪತ್ತೆ ಹಚ್ಚಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಗಂಧದ ಕಳ್ಳಸಾಗಾಣಿಕೆ ಪ್ರಕರಣಗಳನ್ನು ಪತ್ತೆ ಹಚ್ಚಿದವರಿಗೆ ಸರ್ಕಾರದವರು ಘೋಷಿಸಿರುವ ಬಹುಮಾನ ಇವರಿಗೂ ಅನ್ವಯಿಸುವುದೆ ?

ಇ) ಹಾಗಿದ್ದಲ್ಲಿ ಸದರಿ ಇಲಾಖೆಯಲ್ಲಿನ ಬಹುಮಾನ ಪಡೆದ ಅಧಿಕಾರಿಗಳ ಸಂಖ್ಯೆ ಎಷ್ಟು (ಅವರ ಹೆಸರು, ಹುದ್ದೆ ಹಾಗೂ ಅವರ ವಿವರ ಒದಗಿಸುವುದು)?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯಮಂತ್ರಿಗಳು).—

ಆ) ೧೯೮೬ ... ೧೨ ಪ್ರಕರಣಗಳು
೧೯೮೭ ... ೧೨ ಪ್ರಕರಣಗಳು
೧೯೮೮ ... ೧೦ ಪ್ರಕರಣಗಳು
(೧೭-೫-೧೯೮೮ ರವರೆಗೆ)

ಇ) ಹೌದು, ಅನ್ವಯಿಸುತ್ತದೆ

ಈ) ಇತ್ತೀಚೆಗೆ ಈ ಯೋಜನೆಯನ್ನು ಪೋಲೀಸ್ ಇಲಾಖೆಗೆ ಅನ್ವಯಗೊಳಿಸಿರುವುದರಿಂದ ಇನ್ನು ಯಾರಿಗೂ ಬಹುಮಾನವನ್ನು ನೀಡಿರುವುದಿಲ್ಲ.

Doctors working in Rural areas

1724. SRI G.S. SHIVANANJAPPA (Gubbi).—Will the Minister for Health be pleased to State ?

1, Whether it has come to the notice of Government that Central Government is paying Rs. 250/- as Rural allowancoet Doctors working in Rural areas ?

2. Whether this scheme is adopted by the State Government if so since when ?

3. Whether it has come to the notice of Government that if the above scheme is implemented it would improve the villages?

4. If so what steps have been taken by the Government in this regard?

SRI B. RACHIAH (Health Minister),—

1. Yes.
2. No
3. Yes

4, This has been recommended to the Ninth Finance Commission.

ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸೇರ್ಪಡೆ ಕುರಿತು

೧೯೩೫. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ, (ಕುಂದಾಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿರುವ ವಿದ್ಯಾರ್ಥಿ ಸೇರ್ಪಡೆ ಸಾಮರ್ಥ್ಯದ ಕಾಲೇಜುವಾರು ವಿವರಗಳನ್ನು ಒದಗಿಸುವುದು